# ಸ್ವಗತ

■ ವಸುಂಧರಾ ಕದಲೂರು
ಕಲೆ: ರಾಮಕೃಷ್ಣ ಸಿದ್ರಪಾಲ

'ನಿಲ್ಲು ಲಕ್ಷ್ಮಣಾ, ಈ ಕಾಡು ನೆಲದ ಮೇಲೆ ಗೀರುತ್ತಾ ನಿನ್ನ ಬಾಣದ ಮೊನಚನ್ನೇಕೆ ಹಾಳು ಮಾಡಿಕೊಳ್ಳುವೆ?' ಸೀತೆಯ ಗಡಸುದನಿಗೆ ಲಕ್ಷ್ಮಣ ಬೆಚ್ಚಿಬಿದ್ದನು. ಏನು ಮಾರುತ್ತರ ಕೊಡವುದೆಂದು ಯೋಚಿಸಿ ಕ್ಷಣಕಾಲ ತಬ್ಬಿಬ್ಬಾದನು. 'ಲಕ್ಷ್ಮಣಾ, ನಿನ್ನಣ್ಣ ನಿನ್ನನ್ನು ಇಲ್ಲಿ ಇರಿಸಿರುವುದು ನನಗೆ ಕಾವಲು ಇರುವುದಕ್ಕೋ ಅಥವಾ ಹೀಗೆ ಗೆರೆಯ ನಡುವೆ ಬಂಧಿಸಿ ನನ್ನನ್ನು ಒಂಟಿಯಾಗಿ ಬಿಟ್ಟು ಹೋಗಲಿಕ್ಕೋ..? ವೃಥಾ ಈ ವ್ಯರ್ಥ ಪ್ರಯತ್ನ ಮಾಡುವುದನ್ನು ಬಿಟ್ಟುಬಿಡು. ನಾನೂ ನಿನ್ನೊಡನೆಯೇ ಬರುವವಳಿದ್ದೇನೆ.' ಮೊದಲ ಪ್ರಶ್ನೆಗೆ ಉತ್ತರಿಸಲು ತೋಚದೆ ಚಡಪಡಿಸುತ್ತಿದ್ದವನಿಗೆ ಬಾಣದಂತೆ ಬಂದ ಎರಡನೆಯ ಪ್ರಶ್ನೆಯು ಕಸಿವಿಸಿ ಮಾಡಿತು. 'ಯಾವುದಕೆ ಮೊದಲುತ್ತರಿಸಲಿ? ಕಾಡಿನ ಈ ಒರಟು ನೆಲಕ್ಕೆ ಉಜ್ಜಿದರೆ ಬಾಣದ ತುದಿಯ ಮೊನಚು ಸ್ವಲ್ಪ ಸವೆಯಬಹುದು, ಮೊಂಡಾಗಬಹುದು ಅಥವಾ ಮುರಿಯಬಹುದು. ನಿಜ, ಆದರೆ ಬಾಣ ಬಿಡುವ ಕೈಗಳ ಬಲ, ಭುಜಗಳ ಸಾಮರ್ಥ್ಯ, ಕಣ್ಣಂದಾಜಿನ ಮೇಲೆ ಅಲ್ಲವೇ ಬಾಣದ ವೇಗ ಬಿರುಸು, ಗುರಿ ನಿಂತಿರುವುದು?! ಅಥವಾ ಅತ್ತಿಗೆ ಹೇಳುವಂತೆ ಕಲ್ಲುಮುಳ್ಳಿರುವ ಈ ಒರಟು ಕಾಡುನೆಲವನ್ನು ಉಜ್ಜಿ ಉಜ್ಜಿ ಬಾಣದ ತುದಿಯು ಮೊಂಡಾಗಿ, ಮೊಂಡು ಬಾಣವನು ಬಿಟ್ಟಾಗ, ಅದು ರಭಸವಾಗಿ ಹೋಗದೆ ಬೇಟೆಯ ಬಲಿಯನ್ನು ಸರಿಯಾಗಿ ನಾಟಿ, ಬಲುವಾಗಿ ಘಾಸಿಗೊಳಿಸದೇನೋ. ಬೇಟೆಯ ಪ್ರಾಣಿಯನ್ನು ಬಲಿತೆಗೆದು ಕೊಳ್ಳದೇನೋ. ಆದರೆ ಅತ್ತಿಗೆಯನ್ನೂ ಜೊತೆಗೆ ಕರೆದುಕೊಂಡು ಹೋಗುವುದಾದರೂ ಹೇಗೆ? ಅಣ್ಣ ಈಗಾಗಲೇ ಅದೆಷ್ಟು ದೂರ ಕ್ರಮಿಸಿರುತ್ತಾನೆಯೋ?' ಲಕ್ಷ್ಮಣನಿಗೆ ಪದೇ ಪದೇ ಪ್ರಶ್ನೆಗಳು ಮೂಡಿ ಗೊಂದಲವಾಯ್ತು. ಅತ್ತಿಗೆ ಪುನಃ ತಾನು ಉತ್ತರಿಸಲು ಸಾಧ್ಯವಾಗದ ಮತ್ತೊಂದು ಪ್ರಶ್ನೆ ಕೇಳಿದರೆ ಏನು ಮಾಡಲಿ ಎಂದು ಅನ್ಯಮನಸ್ಕನಾಗಿ ಚಿಂತಿಸುತ್ತಾ, ನೆಲದ ಕಡೆಗೆ ಮುಖ ಮಾಡಿದ್ದವನು ಪುನಃ ವೇಗ ಹೆಚ್ಚಿಸಿಕೊಂಡು ಆಳವಾಗಿ ಗೆರೆ ಕೊರೆಯತೊಡಗಿದ.

ಕೈಗಳು ಕ್ರಿಯಾಶೀಲವಾಗಿದ್ದರೂ ಆತನ ಮನಸ್ಸಿನ ಯೋಚನಾ ಲಹರಿಯ ನದಿಯು ಭೋರ್ಗರೆದಂತೆ ಹರಿಯಿತು. 'ಇಲ್ಲಾ, ಇಲ್ಲಾ.., ಅತ್ತಿಗೆಯು ಮತ್ತೇನೋ ಬೇರೆಯದೇ ಆಲೋಚನೆ ಇಟ್ಟುಕೊಂಡು ಪ್ರಶ್ನೆ ಕೇಳಿದ ಹಾಗಿದೆಯಲ್ಲವೇ?' ಲಕ್ಷ್ಮಣನಿಗೆ ಏನೊಂದೂ ಅರ್ಥವಾಗದೆ, ತಲೆ ಕೊಡವಿಕೊಂಡ. ಹಿಂದೆಯೇ ಸೀತೆಯು ಅಸಮಾಧಾನದಲಿ ಜೋರಾಗಿ ನಿಟ್ಟುಸಿರು ಬಿಡುತ್ತಿರುವ ಸದ್ದು ಮತ್ತೆ ಮತ್ತೆ ಅವನಿಗೆ ಕೇಳುತಲಿತ್ತು.

ಲಕ್ಷ್ಮಣ ಆಶ್ರಮದ ಸುತ್ತಾ ತನ್ನಷ್ಟಕ್ಕೇ ಗೆರೆ ಎಳೆಯಲು ಉಪಕ್ರಮಿಸಿದ. ಆತ ಕಾರ್ಯೋನ್ಮುಖನಾಗಿ ಮನಸ್ಸನ್ನು ಪೂರ್ಣ ಅದರಲ್ಲೇ ನೆಲೆಗೊಳಿಸಿರುವಂತೆ ಕಂಡರೂ, ಅಂತರ್ಯದಲ್ಲಿ ಆತ ಅನ್ಯವಿಚಾರ ಆಲೋಚಿಸುತ್ತಿದ್ದ. 'ಈಗ ತಾನೇ ಇಲ್ಲೇ ಕುಟೀರದ ಸುತ್ತಾ ಸುಳಿದಾಡುತ್ತಿದ್ದ ಸಾಮಾನ್ಯ ಕಾಡು ಜಿಂಕೆಯೊಂದು ಅತ್ತಿಗೆಯನ್ನು ಅದೆಷ್ಟು ಆಕರ್ಷಿಸಿತ್ತು! ಅದೇ ಜಿಂಕೆಯು ತನಗೆ ಆಡಲಿಕ್ಕೆ ಬೇಕೆಂದು ಒಳ್ಳೆ ಮಗುವಿನ ಹಾಗೆ ಹಠ ಹಿಡಿದುಬಿಟ್ಟರಲ್ಲಾ! ಅಣ್ಣನೂ ಸಹ ಅದನ್ನು ಹಿಡಿದು ತರುವ ಹುಕಿಯಲ್ಲಿ ಅದು ಮಿಂಚಿ ಮರೆಯಾದತ್ತ ಕ್ಷಣ ಮಾತ್ರವೂ ಯೋಚಿಸದೆ ಅರಸಿಕೊಂಡು ಹೋಗೇಬಿಟ್ಟ. ಅದೆಂಥಾ ಹೊಸತನವಿತ್ತಪ್ಪಾ ಅದರಲ್ಲಿ? ಅದೇನು ಮೋಹಕತೆ ಇತ್ತು ಅದರಲ್ಲಿ?! ಅದೇ ಜಿಂಕೆಯೇ ಬೇಕೆಂದು ಅತ್ತಿಗೆ ಎಷ್ಟು ಆಗ್ರಹಿಸಿದರು! ಸದ್ಯ ತನ್ನ ಪ್ರಿಯ ಮಡದಿ ತನ್ನೊಡನೆ ಮೊದಲಿನಂತೆ ಮಾತನಾಡಿದರೆ ಸಾಕೆಂದು ಕಾತರದಿಂದ ಕಾಯುತ್ತಿದ್ದನಲ್ಲ ಅಣ್ಣ, ಹೊರಟೇ ಬಿಟ್ಟ. ಅತ್ತಿಗೆ ಜಿಂಕೆಯ ಬದಲು ಈಗಿಂದೀಗಲೇ ತನಗೆ ಸೂರ್ಯಚಂದ್ರರೇ ಬೇಕೆಂದಿದ್ದರೂ ತಂದುಕೊಡಲು ಹೊರಡುತ್ತಿದ್ದನೇನೋ... ಹಲವು ದಿನಗಳಿಂದ ಜಾರಿಯಲ್ಲಿರುವ ಈ ಮುನಿಸಿನ ಬದುಕು ಆತನಿಗೂ ಸಾಕೆನಿಸಿಬಿಟ್ಟಿರಬೇಕಲ್ಲವೇ!? ನಿಜ, ಅತ್ತಿಗೆ 'ಆ ಜಿಂಕೆ ನನಗೆ ಬೇಕು...' ಎನ್ನುತ್ತಾ '... ತಂದುಕೊಡುವಿರಾ...' ಎಂದು ವಾಕ್ಯ ಮುಗಿಸುವ ಮೊದಲೇ ನಿಮಿಷಾರ್ಧವೂ ತಡಮಾಡದೆ ಹಿಡಿದು ತರಲು ಅದು ಕುಪ್ಪಳಿಸಿ ಕುಪ್ಪಳಿಸಿ ಪುಟ ನೆಗೆದು ಹೋದತ್ತ ರೊಯ್ಯನೆ ಹೊರಟೇ ಬಿಟ್ಟ! ಹೋಗುವ ಮುನ್ನ, ನನ್ನನ್ನು ಬಳಿ ಕರೆದು, 'ಲಕ್ಷಣಾ ನಿನ್ನ ಅತ್ತಿಗೆ ಒಂಟಿ ಇರುತ್ತಾಳೆ, ನಾನು ಬರುವವರೆಗೂ ನೀನು ಕಾವಲಿರು, ಜೋಪಾನ. ಆಕೆ ಏನಾದರು ಬಿರುಸು ನುಡಿಗಳನ್ನು ಆಡಿದರೂ ಬೇಸರಿಸದಿರು, ಆಕೆ ಕೋಪಿಸಿದರೆ ನೀನು ಮುನಿಯದಿರು. ಇಗೋ ಈಗ ಬಂದುಬಿಡುವೆ' ಎಂದು ಕಿವಿಯಲ್ಲಿ ಹೇಳಿ ಇಲ್ಲಿಯ ಜವಾಬ್ದಾರಿ ಹೊರಿಸಿ, ಕಾವಲಿರಿಸಿ ಹೋದ.

'ಅತ್ತಿಗೆ ನನ್ನ ಮೇಲೆ ಮುನಿಯುವುದೇ...?

